ಕರ್ನಾಟಕ ವಿಧಾನ ಸಭೆ

ಬುಧವಾರ, ೧೮ನೇ ಮಾರ್ಚ್ ೧೯೯೨, ಫಾಲ್ಗುಣ ೨೮, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೧೫ ನಿಮಿಷಕ್ಕೆ ಸಮಾವೇಶಗೊಂಡಿತು.

ಉಪಾಧ್ಯಕ್ಷಣಿಯವರು **(ಶ್ರೀಮತಿ ನಾಗಮ್ಮ ಕೇಶವಮೂರ್ತಿ)** ಅವರು ಪೀಠವನ್ನು ಅಲಂಕರಿಸಿದರು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ : ಮಂಡ್ಯ ಜಿಲ್ಲೆಯ ರೈತರಿಗೇ ನೀರು ಬಿಡುವ ಬಗ್ಗೆ

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಮುಂಚೆ ಒಂದು ವಿನಂತಿ. ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಆ ಸೂಚನೆ ಮೇಲೆ ಸರಕಾರದವರು ಉತ್ತರ ಕೊಡುತ್ತೇವೆಂದು ಹೇಳಿದ್ದರು.

ಉಪಾಧ್ಯಕ್ಷರು : ಮಧ್ಯಾಹ್ನ ...

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಏನಾಗಿದೆ ಎಂದರೆ ಇಡೀ ಮಂಡ್ಯ ಜಿಲ್ಲೆಯಲ್ಲಿ ನಾವು ಯಾರೂ ಊರುಗಳಿಗೆ ಹೋಗುವಹಾಗೆಯೇ ಇಲ್ಲ. ನಾನು ಒಂದು ಮಾತು ಹೇಳುತ್ತೇನೆ. ಇರಿಗೆಷನ್ ಡಿಪಾರ್ಟ್‌ಮೆಂಟ್‌ನವರಿಗೆ ಹೇಳಿ ನೀರು ಬಿಡಿಸಿ. ಆಗ ನಮಗೆ ಸರಿಹೋಗುತ್ತೇದೆ.

ಶ್ರೀಮತಿ ಮೋಟಮ್ಮ : ಕೊಶ್ಚನ್ ಹವರ್ ಆದಮೇಲೆ...

ಶ್ರೀ ಎಲ್.ಆರ್. ಶಿವರಾಮೇಗೌಡ : ಕೊಶ್ಚನ್ ಹವರ್ ಕಟ್ಟಿಕೊಂಡು ನನಗೆ ಏನಾಗಬೇಕಾಗಿದೆ ಮೋಟಮ್ಮನವರೇ, ಅಲ್ಲಿ ಜನ ನಾವು ಊರಿಗೆ ಹೋಗಗೊಡುತ್ತಿಲ್ಲ. ಮಾನ್ಯ ಉಪಾಧ್ಯಕ್ಷಣಿಯವರೇ ನೀವು ನಮ್ಮ ಸಹಾಯಕ್ಕೆ ಬರುತ್ತೀರೋ ಇಲ್ಲವೋ?

ಉಪಾಧ್ಯಕ್ಷಣಿಯವರು : ಖಂಡಿತಾ ಬರುತ್ತೇನೆ ...

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು ಈ ಸದನದ ಒಬ್ಬ ಗೌರವಾನ್ವಿತ ಸದಸ್ಯ. ನನ್ನ ಗೌರವ ನನ್ನ ಹಕ್ಕನ್ನು ಕಾಪಾಡತಕ್ಕದ್ದು ನಿಮ್ಮ ಕರ್ತವ್ಯ. ಆ ಕಾರಣಕ್ಕಾಗಿ ನಾನು ಕೇಳುತ್ತಿದ್ದೇನೆ. ನನ್ನ ಜಿಲ್ಲೆಯಲ್ಲಿ ರೈತರು ಕಂಗಾಲಾಗಿದ್ದಾರೆ. ನೀರು ಬಿಡಬೇಕು, ರೈತರ ಕಬ್ಬನ್ನು ಶುಗರ್ ಫ್ಯಾಕ್ಟರಿಯವರು ತೆಗೆದುಕೊಳ್ಳ ಬೇಕು, ಅದು ಯಾವುದೂ ಆಗುತ್ತಿಲ್ಲ.

ಉಪಾಧ್ಯಕ್ಷಣಿಯವರು : ಮಧ್ಯಾಹ್ನ ಕೊಶ್ಚನ್ ಹವರ್ ಆದ ತಕ್ಷಣ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಧರ್ಮ ಸಿಂಗ್ (ಗೃಹಸಚಿವರು) : ಈಗ ಕ್ಯಾಬಿನೆಟ್ ಮೀಟಿಂಗ್ ನಡೆಯುತ್ತಿದೆ. ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ. ಕೊಶ್ಚನ್ ಹವರ್ ಆದಮೇಲೆ ಅವಕಾಶ ಇದೆ, ಸಂಬಂಧಪಟ್ಟ ಮಂತ್ರಿಗಳು ಬಂದಮೇಲೆ ತಾವು ಮತ್ತೊಮ್ಮೆ ಹೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಹತ್ತು ಲಕ್ಷ ಟನ್ ಕಬ್ಬು ಒಣಗಿ ಹಾಳಾಗುತ್ತಿದೆ.

ಉಪಾಧ್ಯಕ್ಷಣಿಯವರು : ಈಗ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಶಿವರಾಮೇಗೌಡರೇ ಸ್ವಲ್ಪ ಕುಳಿತುಕೊಳ್ಳಿ. ನೀವು ಹಠ ಮಾಡಬಾರದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಹಠ ಮಾಡುತ್ತಿಲ್ಲ. ಯಾರಾದರೂ ಅಧಿಕಾರಿಗಳು ಮಂಡ್ಯ ಜಿಲ್ಲೆಗೆ ಹೋಗಿ ಬಂದಿದ್ದಾರೆಯೇ ಕೇಳಿರಿ. ಇಷ್ಟೆಲ್ಲಾ ಗಲಾಟೆ ಮಾಡಿದ್ದರೂ ಒಬ್ಬ ಅಧಿಕಾರಿಯೂ ಸ್ಥಳಕ್ಕೆ ಹೋಗಿ ನೋಡಲಿಲ್ಲ. ರೈತರು ಕಂಗಾಲಾಗಿದ್ದಾರೆ. ಇವತ್ತು ನಾವು ಊರುಗಳಿಗೆ ಹೋಗುವುದಕ್ಕೆ ಬಿಡುವುದಿಲ್ಲ.

ಉಪಾಧ್ಯಕ್ಷಣಿಯವರು : ದಯವಿಟ್ಟು ತಾವು ಕುಳಿತುಕೊಳ್ಳಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೇ ನಾನು ತಮಗೆ ಗೌರವ ಕೊಡುತ್ತೇನೆ. ನೀವು ಹೆಳತಕ್ಕಂಥ ಮಾತಿಗೆ ಎರಡನೇ ಮಾತಿಲ್ಲ. ಈಗ ಸರಕಾರ ಮಧ್ಯ ಪ್ರವೇಶ ಮಾಡಬೇಕು. ರೈತರಿಗೆ ನೀರು ಬಿಡಿಸಬೇಕು, ರೈತರಿಗೆ ನೀರು ಬಿಡದೇ ಹೋದರೆ ರೈತರ ಪರವಾಗಿ ಈ ಸರಕಾರ ಇಲ್ಲ ಎಂದು ಆಗುತ್ತದೆ.

ಉಪಾಧ್ಯಕ್ಷಣಿಯವರು : ದಯವಿಟ್ಟು ಸ್ವಲ್ಪ ಸಮಯ ಕೊಡುತ್ತೀರಾ?

ಶ್ರೀ ಎಲ್.ಆರ್. ಶಿವರಾಮೇಗೌಡ : ಎರಡು ಸಾರಿ ಸಮಯ ಕೊಟ್ಟಾಯಿತು. ಇಲ್ಲಿಯವರೆಗೆ ಯಾರೂ ಚಕಾರ ಎತ್ತಲಿಲ್ಲ. ಮೊದಲು ರೈತರಿಗೆ ನೀರು ಬಿಡಿ, ನಾನು ಆಮೇಲೆ ಕುಳಿತು ಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ಈಗ ನೀವೊಬ್ಬರೇ ಮಾತನಾಡುತ್ತೀರೋ, ನನಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರೋ?

ಶ್ರೀ ಎಲ್.ಆರ್. ಶಿವರಾಮೇಗೌಡ : ಸರ್ಕಾರದಿಂದ ನೀರು ಬಿಡಿಸುತ್ತೀರಾ?

ಉಪಾಧ್ಯಕ್ಷಣಿಯವರು : ನಿನ್ನೆಯ ದಿವಸ ಈ ವಿಷಯವನ್ನು ತಾವು ಎತ್ತಿದ್ದೀರಿ. ಸಂಸದೀಯ ಮತ್ತು ಶಿಕ್ಷಣ ಮಂತ್ರಿಗಳು, ಇದರ ಬಗ್ಗೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬರಲಿ, ಆಗ ತಾವು ವಿಷಯವನ್ನು ಪ್ರಸ್ತಾಪ ಮಾಡಿ ಆಗ ಅವರು ಅದರ ಬಗ್ಗೆ ತಮಗೆ ಒಪ್ಪಿಗೆಯಾಗುವ ರೀತಿಯಲ್ಲಿ ಉತ್ತರ ಕೊಡುತ್ತಾರೆಂದು ಹೇಳಿದ್ದಕ್ಕೆ ಆಗ ತಾವೂ ಸಹ ಒಪ್ಪಿದಿರಿ. ಈಗ ಮತ್ತೆ ಎತ್ತಿದ್ದೀರಿ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬರಬಹುದು ನೋಡೋಣ. ಖಂಡಿತವಾಗಿ ನಾನು ತಮಗೆ ಸಮಯ ಕೊಡುತ್ತೇನೆ. ಆಗ ತಾವು ಎತ್ತಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ನಿಮ್ಮ ಮಾತಿಗೆ ನನ್ನ ಸಹಮತ ಇದೆ. ಆದರೆ ಭಾರಿ ಕೈಗಾರಿಕಾ ಮಂತ್ರಿಗಳು ಬಂದು ಹೇಳಿಕೆ ಕೊಡುತ್ತಾರೆಂದು ತೀರ್ಮಾನ ಆಗಲಿ. ಆದಕ್ಕೆ ನಾನು ಬದ್ದನಾಗಿದ್ದೇನೆ. ಈಗ ತೀರ್ಮಾನ ಮಾಡತಕ್ಕಂಥಾದ್ದು ಏನೆಂದರೆ ಮಂಡ್ಯ ನಗರದೊಳಗೆ ಬೆಂಕಿ ಬಿದ್ದಿದೆ ಮಂಡ್ಯದಲ್ಲಿ ಬೆಂಕಿ ಬೀಳುತ್ತದೆ. ಅಲ್ಲಿ ಸುಮಾರು 10 ಲಕ್ಷ ಟನ್ ಕಬ್ಬು 30 ಕೋಟಿ ರೂಪಾಯಿಗಳ ಬೆಳೆ ಹಾಳಾಗುತ್ತಿದೆ; ಹೀಗಾದರೆ ನಮ್ಮ ರೈತರ ಗತಿ ಏನು? ಅದಕ್ಕೆ ತಾವು ....

(ಗೊಂದಲ)

ಶ್ರೀ ಧರ್ಮಸಿಂಗ್ : ಈಗ ನೀವು ಅಧ್ಯಕ್ಷರ ಗಮನಕ್ಕೆ ತಂದಿದ್ದೀರಿ. ನಿನ್ನೆಯು ಕೂಡ ಮಾನ್ಯ ಶಿಕ್ಷಣ ಸಚಿವರು ತಮ್ಮ ಮೂಲಕ ಹೇಳಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಬರಲಿ, ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಸಮಗ್ರವಾದ ಉತ್ತರವನ್ನು ಕೊಡಿಸಲಿಕ್ಕೆ ಸರ್ಕಾರ ಸಿದ್ಧವಿದೆ. ಅದರ ಬಗ್ಗೆ

ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ, ಈ ಮಾತನ್ನು ನಿನ್ನೆಯೂ ಕೂಡ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬರುತ್ತಾರೆ. ಸಂಪುಟ ಸಭೆ ನಡೆಯುತ್ತಿದೆ ಅವರು ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಏನು ಆಗಬೇಕೋ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಮಂತ್ರಿಗಳ ಉತ್ತರ ಮುಗಿದ ಮೇಲೆ ದಯವಿಟ್ಟು ನನಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷಣಿಯವರು : ಮಾನ್ಯ ಗೃಹ ಮಂತ್ರಿಗಳು ಈಗ ಉತ್ತರ ಪ್ರಾರಂಭ ಮಾಡಬಹುದು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಪೋಲೀಸ್, ಅಗ್ನಿಶಾಮಕ ಸೇವೆಗಳು, ಜೈಲುಗಳು ಇತ್ಯಾದಿ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರ.

† ಶ್ರೀ ಧರ್ಮಸಿಂಗ್. (ಗೃಹ ಮತ್ತು ಅಬಕಾರಿ ಸಚಿವರು) : ಮಾನ್ಯ ಉಪಾಧ್ಯಕ್ಷಣಿಯವರೇ, ನಿನ್ನೆಯ ದಿವಸ ಅಬಕಾರಿ ಇಲಾಖೆ ಮತ್ತು ಪೋಲೀಸ್ ಇಲಾಖೆಯ ಮೇಲೆ ಸಾಕಷ್ಟು ಈ ಸದನದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನಾನು ಮೊಟ್ಟ ಮೊದಲನೆಯದಾಗಿ ಅಬಕಾರಿ ಇಲಾಖೆಯನ್ನು ತೆಗೆದುಕೊಂಡು ಅದರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ ಆಗಲಿ. 1991-92ನೇ ಸಾಲಿನಲ್ಲಾಗಲಿ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಆದ್ಯತೆಕೊಟ್ಟು ಹೆಚ್ಚಿನ ಮೊತ್ತಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಪ್ಲಾನಿಂಗ್ ಕಮಿಷನ್‌ನಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಇದರ ಜೊತೆಗೆ ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್, ತದನಂತರ ಅಬಕಾರಿಯಲ್ಲಿ ಸಾಕಷ್ಟು ರೆವಿನ್ಯೂ ಪಡೆಯುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ 4 ಕೋಟಿ ಜನಸಂಖ್ಯೆ ಸಂಬಂಧವಾಗಿ ಅವರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ರೀತಿಯಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವ ಜನರ ಕಲ್ಯಾಣ ಕೆಲಸ ಮಾಡತಕ್ಕಂಥ ರೀತಿಯಲ್ಲಿಯೂ ಕೂಡ ಆದಾಯ ಪಡೆಯಬೇಕಾಗಿದೆ. 1991-92ನೇ ಸಾಲಿನಲ್ಲಿ ಮತ್ತು 1989-90ನೇ ಸಾಲಿನಲ್ಲಿ 550 ಕೋಟಿರೂಪಾಯಿಗಳಷ್ಟು ಆದಾಯ ಈ ಒಂದು ಇಲಾಖೆಯಿಂದ ಬರಬೇಕಾಗಿತ್ತು. ಇದನ್ನು ಕೂಡ ನಿಗದಿಪಡಿಸಲಾಗಿತ್ತು. ಇವತ್ತು ಅಬಕಾರಿ ಇಲಾಖೆಯ ಬಗ್ಗೆ ಸಾರ್ವಜನಿಕರ ಮನಸ್ಸಿನಲ್ಲಿ ಏನಿದೆ, ಮತ್ತೆ ಸಮಾಜದಲ್ಲಿ ಕೆಲವು ಚಿಂತನಶೀಲ ವ್ಯಕ್ತಿಗಳು ಏನಿದ್ದಾರೆ ಅವರು ಈ ಒಂದು ಇಲಾಖೆಯನ್ನು ಬೇರೆ ದೃಷ್ಟಿಯಿಂದ ಕೂಡ ನೋಡುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಅಧಿಕಾರ ಸ್ವೀಕಾರ ಮಾಡಿಕೊಂಡ ಮೇಲೆ ಈ ಒಂದು ಇಲಾಖೆಯಲ್ಲಿ ಏನು ಇವತ್ತು ರೆವಿನ್ಯೂ ಕಲೆಕ್ಷನ್ ಮಾಡುವಂತಾದ್ದು ಆಗಬಹುದು ಮತ್ತು ಇವತ್ತು ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ್ದು ಬಾಕಿ ಆಗಿರಬಹುದು. ಇದರಲ್ಲಿ ಸ್ವಲ್ಪ ನಾವು ರಿಯಾಯಿತಿ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತು ಮತ್ತು ಜನರ ಮನಸ್ಸಿನಲ್ಲಿರತಕ್ಕಂತ ಭಾವನೆಗಳನ್ನು ಮಾನ್ಯ ಸದನದ ಸದಸ್ಯರು ಕೂಡ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಅಬಕಾರಿ ಇಲಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ 550 ಕೋಟಿ ರೂಪಾಯಿಗಳ ಆದಾಯ ಬರಬೇಕು. ಅಂಕಿ ಅಂಶಗಳ ಮೂಲಕ ನಾನು ಹೇಳಬೇಕಾದರೆ 1990-91ನೇ ಸಾಲಿನಲ್ಲಿ 550 ಕೋಟಿ ರೂಪಾಯಿಗಳವರೆಗೆ ವಸೂಲಿ ಮಾಡುವ ನಿರ್ಧಾರ ಇತ್ತು. ಆದರೆ ಆ ಒಂದು ವರ್ಷದ ಅವಧಿಯಲ್ಲಿ ಕೇವಲ 429 ಕೋಟಿ ರೂಪಾಯಿಗಳನ್ನು ಮಾತ್ರ ವಸೂಲಿ ಮಾಡಲಾಯಿತು. 1991-92ನೇ ಸಾಲಿನಲ್ಲಿ 550 ಕೋಟಿ ರೂಪಾಯಿ ಏನು ನಿರೀಕ್ಷೆ ಮಾಡಿದ್ದೇವೋ ಅದರಲ್ಲಿ ಕೇವಲ 11 ತಿಂಗಳಲ್ಲಿ 441 ಕೋಟಿ